

ಸುಜಯ್ ಘೋಷ್



# ಕಲ್ಲಾಗಿಸುವ ಅಹಲ್ಯೆ!

■ ಗೌರಿ

**ಸಸ್ಪೆನ್ಸ್–ಥ್ರಿಲ್ಲರ್ ಜಾನರ್‌ನ ಸಮರ್ಥ ಬಳಕೆಯ ಕಾರಣಕ್ಕೆ ಗಮನಸೆಳೆಯುವ 'ಅಹಲ್ಯೆ' ಕಿರುಚಿತ್ರವನ್ನು, ಸೃಜನಶೀಲ ನಿರ್ದೇಶಕನೊಬ್ಬ ಪುರಾಣಕಥೆಯೊಂದನ್ನು ಬಳಸಿಕೊಂಡು ಸಮಕಾಲೀನ ಸಮಾಜಕ್ಕೆ ನೀಡಿದ ಪ್ರತಿಸ್ಪಂದನದ ರೀತಿಯೂ ನೋಡಬಹುದು.**

ಗೌತಮ ರುಷಿಯ ಪತ್ನಿ ಅಹಲ್ಯೆಯ ಕಥೆ ಜನಪ್ರಿಯ. ಅಪ್ರತಿಮ ಸುಂದರಿಯಾದ ಅಹಲ್ಯೆಗೆ ದೇವಲೋಕದ ಅಧಿಪತಿ ಇಂದ್ರ ಮೋಹಿತನಾಗುತ್ತಾನೆ. ಅವನಿಗೆ ಅವಳನ್ನು ಕೂಡುವ ಬಯಕೆಯಾಗುತ್ತದೆ. ಆದರೆ ಪರಮಪತಿವ್ರತೆ ಅಹಲ್ಯೆ ಪರಪುರುಷನೊಂದಿಗೆ ಸರಸವಾಡುವುದುಂಟೇ? ಇಂದ್ರ ಇದಕ್ಕೊಂದು ಉಪಾಯ ಮಾಡುತ್ತಾನೆ. ಗೌತಮ ಮಹರ್ಷಿ ಇಲ್ಲದ ಸಮಯ ನೋಡಿ, ಅವರ ರೂಪವನ್ನೇ ಧರಿಸಿ ಆಶ್ರಮಕ್ಕೆ ಹೋಗಿ ಅಹಲ್ಯೆಯನ್ನು ಕೂಡುತ್ತಾನೆ. ಇದನ್ನು ತಿಳಿದ ಗೌತಮ ಮಹರ್ಷಿ 'ನೀನು ಕಲ್ಲಾಗಿಹೋಗು' ಎಂದು ಅಹಲ್ಯೆಗೆ ಶಾಪಕೊಡುತ್ತಾನೆ. ಶಾಪದಿಂದ ಕಲ್ಲಾಗುವ ಅಹಲ್ಯೆ ಮುಂದೆ ರಾಮನ ಪಾದಸ್ಪರ್ಶದಿಂದ ಮರಳಿ ಮೊದಲಿನ ರೂಪ ಪಡೆಯುತ್ತಾಳೆ.

ರಾಮಾಯಣದ ಈ ಕಥೆ ಭಾರತೀಯ ಸಾಹಿತ್ಯ ಪರಂಪರೆಯುದ್ದಕ್ಕೂ ಮತ್ತೆ ಮತ್ತೆ ವ್ಯಾಖ್ಯಾನಕ್ಕೆ ಒಳಗಾಗುತ್ತಲೇ ಬಂದಿದೆ. ಪು.ತಿ.ನ. 'ಅಹಲ್ಯೆ'ಯ ಮನೋತಳಮಳಗಳನ್ನಿಟ್ಟುಕೊಂಡು ಅದೇ ಹೆಸರಿನ ನಾಟಕ ಬರೆದಿದ್ದಾರೆ. ಪಂಚ ಪತಿವ್ರತೆಯರಲ್ಲಿ ಒಬ್ಬಳಾದರೂ ಪುರುಷನಿಂದಲೇ ಮೋಸಹೋಗುವ ಮತ್ತು ಮೋಸ ಹೋದಮೇಲೂ ತಾನೇ ಅದಕ್ಕೆ ಶಿಕ್ಷೆ ಅನುಭವಿಸುವ ಅಹಲ್ಯೆಯನ್ನು, ಅನಾದಿ ಕಾಲದಿಂದಲೂ ಅಕಾರಣ ಶೋಷಣೆಗೆ ಒಳಗಾಗುತ್ತ ಬಂದಿರುವ ಸ್ತ್ರೀಸಮೂಹದ ಪ್ರತಿನಿಧಿಯಾಗಿಯೂ ನೋಡಿದ ಸಾಕಷ್ಟು ಉದಾಹರಣೆಗಳಿವೆ.

ಸುಜಯ್ ಘೋಷ್ ನಿರ್ದೇಶನದ 'ಅಹಲ್ಯಾ' ಎಂಬ ಬಂಗಾಳಿ ಕಿರುಚಿತ್ರವೂ ರಾಮಾಯಣದ

| | |
|---|---|
| ಹೆಸರು: | ಅಹಲ್ಯಾ |
| ನಿರ್ದೇಶಕ: | ಸುಜಯ್ ಘೋಷ್ |
| ಸಂಗೀತ: | ನಬಾರುನ್ ಬೋಸ್ |
| ತಾರಾಗಣ: | ಸೌಮಿತ್ರ ಚಟರ್ಜಿ, ತೋತಾ ರಾಯ್ ಚೌಧರಿ, ರಾಧಿಕಾ ಆಪ್ಟೆ |

ಅಹಲ್ಯಾ ಪ್ರಸಂಗದ ಪುನರ್‌ವ್ಯಾಖ್ಯಾನಕ್ಕೆ ಪ್ರಯತ್ನಿಸುತ್ತದೆ. ಆ ಕಥೆ ಇಂದಿನ ಕಾಲಕ್ಕೆ ಹೊಂದಿಸಿ ಮರುನಿರೂಪಿಸುವುದರಲ್ಲಿಯೇ ನಿಂತಿದ್ದರೆ ಇದೂ ಹತ್ತರಲ್ಲಿ ಹನ್ನೊಂದನೇ ಪ್ರಯತ್ನವಾಗಿಬಿಡುತ್ತಿತ್ತು. ಆದರೆ ಮೂಲಕಥನದ ಪೊರೆ ಕಳಚಿಕೊಂಡು ಇಂದಿನ ಮನುಷ್ಯನ ಬಯಕೆ, ಲಂಪಟತನ, ನಾಗರಿಕತೆಯ ಮುಖವಾಡದ ಹಿಂದಿನ ಕ್ರೌರ್ಯದ ದಾಹ... ಇಂಥ ಹಲವು ಮೂಲಸ್ವಭಾವಗಳನ್ನು ವಾಸ್ತವವೋ, ಕಲ್ಪನೆಯೋ ಸ್ಪಷ್ಟವಿಲ್ಲದ ವಿಚಿತ್ರ ಭೂಮಿಕೆಯಲ್ಲಿ ಪ್ರತಿಧ್ವನಿಸುತ್ತದೆ. ಈ ಧ್ವನಿಶಕ್ತಿಯೇ ಕಿರುಚಿತ್ರದ ಆತ್ಮ.

ಸುಜಯ್ ಘೋಷ್ ಹಿಂದೆ 'ಕಹಾನಿ' ಎಂಬ ಮಹಿಳಾಪ್ರಧಾನ ಸಿನಿಮಾ ನಿರ್ದೇಶಿಸಿದ್ದರು. 'ಅಹಲ್ಯಾ'ದಲ್ಲಿಯೂ ಪುರಾಣಕಾವ್ಯದ ಪ್ರಸಂಗ ಒಂದನ್ನು ಬಹುಸೂಕ್ಷ್ಮವಾಗಿ ಪ್ರಶ್ನಿಸುತ್ತಲೇ ಅದರ ಬೇರೆ ಬೇರೆ ಆಯಾಮಗಳನ್ನು ವ್ಯಾಖ್ಯಾನಿಸುವ ಪ್ರಯತ್ನವನ್ನೂ ಮಾಡಿದ್ದಾರೆ.

ಇಂದ್ರಸೇನ್ ಎಂಬ ಪೊಲೀಸ್ ಅಧಿಕಾರಿ, ಅರ್ಜುನ್ ಎಂಬ ವ್ಯಕ್ತಿ ನಾಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗಾಗಿ ಕಲಾವಿದ ಗೌತಮ ಸಾಧು ಮನೆಗೆ ಬರುತ್ತಾನೆ. ಅಲ್ಲಿ ಅವನಿಗೆ ಎದುರಾಗುವವಳು ಸುಂದರಿ ಗೌತಮನ ಪತ್ನಿ ಅಹಲ್ಯೆ. ಮನೆಯೊಳಗೆ ಹೋದ ಇಂದ್ರಸೇನ್‌ಗೆ ತಾನು ಹುಡುಕುತ್ತಿರುವ ವ್ಯಕ್ತಿಯ ಮಿನಿಯೇಚರ್ ಟೇಬಲ್ ಮೇಲೆ ಕಾಣಿಸುತ್ತದೆ. ಆ ಮಿನಿಯೇಚರ್‌ಗೂ, ಕಾಣೆಯಾದ ವ್ಯಕ್ತಿಗೂ, ಕಲಾವಿದ ಗೌತಮ್ ಸಾಧುಗೂ ಏನು ಸಂಬಂಧ? ಪೊಲೀಸ್ ಈ ಪ್ರಕರಣವನ್ನು ಭೇದಿಸುತ್ತಾನಾ? ತಾನೇ ವ್ಯೂಹದೊಳಗೆ ಸಿಕ್ಕಿಹಾಕಿಕೊಳ್ಳುತ್ತಾನಾ? – ಇದೊಂದು ಸಸ್ಪೆನ್ಸ್ ಥ್ರಿಲ್ಲರ್ ಕಥೆಯಾದ್ದರಿಂದ ಈ ಪ್ರಶ್ನೆಗಳಿಗೆ ಉತ್ತರಿಸಿಬಿಟ್ಟರೆ ವೀಕ್ಷಣೆಯ ಖುಷಿಗೆ ಕುಂದುಂಟಾಗುತ್ತದೆ.

ಪಾತ್ರಗಳ ಹೆಸರಿನಿಂದ ಹಿಡಿದು ರಾಮಾಯಣದ 'ಅಹಲ್ಯಾ' ಪ್ರಸಂಗವನ್ನೇ ನೆನಪಿಸುತ್ತ ಹೋಗುವ ಈ ಕಿರುಚಿತ್ರದ ಕೊನೆಯಲ್ಲೊಂದು ತಿರುವು ಇದೆ. ಆ 'ತಿರುವು' ಏಕಕಾಲಕ್ಕೆ ಪುರಾಣದ ಕಥೆಯ ಹೊಸ ವ್ಯಾಖ್ಯಾನವಾಗಿಯೂ ವರ್ತಮಾನದ ಮನುಷ್ಯನ ಮನೋವಿಕಾರಗಳನ್ನು ಬಿಂಬಿಸುವ ಸೂಕ್ತ ರೂಪಕವಾಗಿಯೂ ಕಾಣಿಸುತ್ತದೆ.

ಈ ಚಿತ್ರದ ಮುಖ್ಯಭೂಮಿಕೆಯಲ್ಲಿ ಬಂಗಾಳದ ಹಿರಿಯ ನಟ ಸೌಮಿತ್ರ ಚಟರ್ಜಿ, ತೋತಾ ರಾಯ್ ಚೌಧರಿ, ಬಾಲಿವುಡ್ ಖ್ಯಾತ ನಟಿ ರಾಧಿಕಾ ಆಪ್ಟೆ ಇದ್ದಾರೆ. 14 ನಿಮಿಷಗಳ ಈ ಚಿತ್ರ ಕಣ್ಣು ಕೀಲಿಸದ ಹಾಗೆ ನೋಡಿಸಿಕೊಂಡು ಹೋಗಲು ಈ ಕಲಾವಿದರ ನಟನೆಯೂ ಕಾರಣ.

'ಅಹಲ್ಯಾ' ಕಿರುಚಿತ್ರವನ್ನು youtu.be/Ff82XtV78xo ಕೊಂಡಿ ಬಳಸಿ ವೀಕ್ಷಿಸಬಹುದು.